# <u>ಜಗನ್ಮೋಹನನೇ ಕೃಷ್ಣ ಜಗವಂ ಪಾಲಿಪನೆ</u>

1. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 60.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 240.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1 with few minor differences which are not considered here.
5. **Note:** Singer has followed these wordings.

ರಾಗ: ಬೇಹಾಗ್ ತಾಳ: ಆದಿ

ಜಗನ್ಮೋಹನನೇ ಕೃಷ್ಣ ಜಗವಂ ಪಾಲಿಪನೆ ॥ ಪ ॥

ಒಬ್ಬಳ ಬಸುರಿಂದಲಿ ಬಂದೆ ಮ-
ತ್ತೊಬ್ಬಳ ಕೈಯಲಿ ನೀ ಬೆಳೆದೆ
ಕೊಬ್ಬಿದ ದೈತ್ಯರ ಒಡಲ ಸೀಳಿದೆ ಇಂಥ
ತಬ್ಬಿಬ್ಬಾಟವನೆಲ್ಲಿ ಕಲಿತೆಯೊ ರಂಗ ॥ ೧ ॥

ಲೋಕದೊಳಗೆ ನೀ ಶಿಶುವಾಗಿ ಮೂ-
ಲೋಕವನೆಲ್ಲ ಬಾಯಲಿ ತೋರಿದೆ
ಆಕಳ ಕಾಯುವ ಚಿಣ್ಣನೆಂದೆನಿಸಿದೆ
ಈ ಕುಟಿಲವನೆಲ್ಲಿ ಕಲಿತೆಯೊ ರಂಗ ॥ ೨ ॥

ಮಗುವಾಗಿ ಪೂತನಿಯ ಮೊಲೆಯನುಂಡೆ ಅವಳು
ಜಗದಗಲಕೆ ಬೀಳಲು ಕೆಡಹಿ
ನಗುತ ನಗುತ ಗೋಪಿ ಮೊಲೆಯುಂಡೆ ಇಂಥ

ತಗಿಬಿಗಿಯಾಟಗಳೆಲ್ಲಿ ಕಲಿತೆಯೊ ರಂಗ ॥ ೩ ॥

ಮಡುವ ಧುಮುಕಿ ಕಾಳಿಂಗನ ಶಿರದಲ್ಲಿ
ಮೃಡಸುರಪಾದ್ಯರು ಪೊಗಳುತಿರೆ
ಹೆಡೆಯ ಮೇಲೆ ಕುಣಿದಾಡುತ ಆಡುತ
ಕಡೆ ಸಾರೆಂಬುದನೆಲ್ಲಿ ಕಲಿತೆಯೊ ರಂಗ ॥ ೪ ॥

ಒಂದು ಪಾದವ ಭೂಮಿಯಲೂರಿ ಮ-
ತ್ತೊಂದು ಪಾದವ ಗಗನವನಳೆದು
ಒಂದು ಪಾದವ ಬಲಿ ಶಿರದಲಿಟ್ಟೆ ಇಂತ
ಚೆಂದದ ವಿದ್ಯೆಯನೆಲ್ಲಿ ಕಲಿತೆಯೊ ರಂಗ ॥ ೫ ॥

ನಂಬಿದ ಪ್ರಹ್ಲಾದನು ಸ್ತುತಿಸೆ ನೀ
ಕಂಭವನೊಡೆದು ಬಂದಾಕ್ಷಣದಿ
ದೊಂಬಿಲಿ ದೈತ್ಯನ ಒಡಲ ಸೀಳಿದೆ ಇಂಥ
ಡಂಬರಾಟವನೆಲ್ಲಿ ಕಲಿತೆಯೊ ರಂಗ ॥ ೬ ॥

ಅಂಬರೀಷ ದ್ವಾದಶಿ ಸಾಧಿಸುತಿರೆ ಆಗ
ಬಂದು ದುರ್ವಾಸರು ಶಾಪ ಕೊಡಲು
ಮುಂದಕೆ ಸಾಧನವಹುದೆಂದು ಚಕ್ರವ
ಹಿಂದಟ್ಟಿಸುವುದನೆಲ್ಲಿ ಕಲಿತೆಯೊ ರಂಗ ॥ ೭ ॥

ವರಬಲದಿಂದಲಿ ಭಸ್ಮಾಸುರನು
ಹರನ ಶಿರದಿ ಕರವಿಡೆ ಬರಲು
ತರುಣಿಯ ರೂಪವ ತಾಳಿ ಆ ದೈತ್ಯನ
ಹರಣವನಳಿದುದನೆಲ್ಲಿ ಕಲಿತೆಯೊ ರಂಗ ॥ ೮ ॥

ವೇದಗಳರಸಿ ಕಾಣದ ಪರಬ್ರಹ್ಮ ನೀ
ಮೋದದಿಂದ ವಿದುರನ ಮನೆಯ್ಯೆದಿ
ಆದರದಿ ಪಾಲ ಕುಡಿದುಳಿದುದ ನೀ
ಮೇದಿನಿಗಿಳಿಸುವುದೆಲ್ಲಿ ಕಲಿತೆಯೊ ರಂಗ ॥ ೯ ॥

ದುರ್ಯೋಧನ ತನ್ನೊಡ್ಡೋಲಗದೊಳು
ಹರಿಯನು ಕರೆಸೆಂದರುಹಲು ಬಂದು
ಧರಣಿಯುಂಗುಷ್ಟದಲೊತ್ತುತ ಅವನನು
ಉರುಳಿಸಿದಾಟವನೆಲ್ಲಿ ಕಲಿತೆಯೊ ರಂಗ ॥ ೧೦ ॥

ಆ ಸಭೆಯಲ್ಲಿ ಖಳ ದುರ್ಯೋಧನನಾಗ
ಮೋಸದಿ ಕೃಷ್ಣನ ಕಟ್ಟೆನಲು
ಸಾಸಿರರೂಪಿನ ಕೃಷ್ಣನೆಂದೆನಿಸಿದ
ವೇಷವನೆಲ್ಲಿ ಕಲಿತೆಯೊ ರಂಗ ॥ ೧೧ ॥

ಸರ್ಪಬಾಣ ಮೊರೆಯುತ ಬರಲು ಕಂ-
ದರ್ಪ ಪಿತನೆ ಕರುಣದಿ ನೀನು
ಒಪ್ಪುವ ಪಾರ್ಥನ ರಥವ ನೆಲಕೆ ಒತ್ತಿ
ತಪ್ಪಿಸಿದಾಟವನೆಲ್ಲಿ ಕಲಿತೆಯೊ ರಂಗ ॥ ೧೨ ॥

ದ್ರೋಣನ ಸಂಗ್ರಾಮದಿ ಹರಿಚಕ್ರವ
ಮಾಣದೆ ಸೂರ್ಯಗೆ ಮರೆಮಾಡಿ
ಕಾಣಿಸಿ ಸೈಂಧವನನು ಕೊಲಿಸಲಾದೆ ಇಂಥ
ಜಾಣತನವ ನೀನೆಲ್ಲಿ ಕಲಿತೆಯೊ ರಂಗ ॥ ೧೩ ॥

ಆ ಶಿರವಾತನ ತಂದೆಯ ಕರದಲಿ
ಸೂಸುತ ರಕುತವು ಬೀಳಲು ಅದನು
ಬೀಸಿ ಬಿಸಾಡಲು ಅವನ ಶಿರವನಾಗ
ಸಾಸಿರ ಮಾಡಿದುದೆಲ್ಲಿ ಕಲಿತೆಯೊ ರಂಗ ॥ ೧೪ ॥

ಆದಿ ಮೂಲನೆ ಎಂದು ಕರಿರಾಜ ಕರೆಯಲು
ಯಾದವರಾಯ ನೀ ನಗುತಲಿ ಬಂದು
ಆದರದಿಂದ ಗಜೇಂದ್ರನ ಸಲಹಿದೆ
ಆ ದಿವ್ಯಾಟಗಳೆಲ್ಲಿ ಕಲಿತೆಯೊ ರಂಗ ॥ ೧೫ ॥

ಎಂದೆಂದಿಗು ನಿಮ್ಮ ಗುಣಗಳ ಪೊಗಳಲು
ಇಂದ್ರಾದಿಗಳಿಗೆ ಅಳವಲ್ಲ

ಮಂದರಧರ ಶ್ರೀ ಪುರಂದರ ವಿಠಲನೆ
ಒಂದೊಂದಾಟವನೆಲ್ಲಿ ಕಲಿತೆಯೊ ರಂಗ ॥ ೧೬ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಒಬ್ಬಳ ಬಸುರಿಂದಲಿ ಬಂದೆ...** – ದೇವಕಿಯ ಮಗ, ಯಶೋದೆಯ ಸಾಕುಮಗ.

**ತಗಿಬಿಗಿಯಾಟ** – ದಿಗ್ಭ್ರಮೆಗೊಳಿಸುವ ಆಟ.

**ಮೃಡಸುರಪಾದ್ಯರು** – ಶಿವ, ಇಂದ್ರ ಮೊದಲಾದವರು.

**ಹೆಡೆಯ ಮೇಲೆ** – ಕಾಳಿಂದಿ ಮಡುವಿನಲ್ಲಿ ಕಾಳಿಂಗನ ಹೆಡೆಯ ಮೇಲೆ.

**ಒಂದು ಪಾದವ...** – ವಾಮನಾವತಾರದಲ್ಲಿ ತ್ರಿವಿಕ್ರಮ ರೂಪ.

**ಸರ್ಪಬಾಣ...** – ಮಹಾಭಾರತ ಯುದ್ಧದಲ್ಲಿ ಕರ್ಣನು ಪ್ರಯೋಗಿಸಿದ ಅಮೋಘವಾದ ಸರ್ಪಾಸ್ತ್ರದಿಂದ ಅರ್ಜುನನನ್ನು ಕಾಪಾಡಿದ ಪ್ರಸಂಗ.

**ದ್ರೋಣನ ಸಂಗ್ರಾಮದಿ** – ಮಹಾಭಾರತದ ದ್ರೋಣ ಪರ್ವದಲ್ಲಿ ಬರುವ ಪ್ರಸಂಗ. ಅಭಿಮನ್ಯುವನ್ನು ಕೊಂದ ಸೈಂಧವ ಜಯದ್ರಥನನ್ನು ಸಂಜೆಯೊಳಗೆ ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದ ಅರ್ಜುನನಿಂದ ಕೊಲ್ಲಿಸಲು ತನ್ನ ಚಕ್ರದಿಂದ ಸೂರ್ಯನನ್ನು ಮರೆಮಾಡಿ ಸಂಜೆಯಂತೆ ಕಾಣಿಸಿದ; ಹೆದರಿ ಅಡಗಿದ್ದ ಜಯದ್ರಥನು ಸಂಜೆಯಾಯಿತೆಂದು ಹೊರಗೆ ಬರಲು ಅರ್ಜುನನು ಅವನನ್ನು ಕೊಂದನು. ಜಯದ್ರಥನ ತಂದೆ ವೃದ್ಧಕ್ಷತ್ರನು ಸಾಯಂಸಂಧ್ಯೆಯಲ್ಲಿ ತೊಡಗಿದ್ದಾಗ, ಅರ್ಜುನನ ಬಾಣದಿಂದ ಕತ್ತರಿಸಲ್ಪಟ್ಟ ಜಯದ್ರಥನ ತಲೆಯು ವೃದ್ಧಕ್ಷತ್ರನ ಬೊಗಸೆಯಲ್ಲಿ ಬಿದ್ದಿತು. ಕಾತರನಾಗಿ ಅವನು ತಲೆಯನ್ನು ಭೂಮಿಯ ಮೇಲೆ ಬಿಸಾಡಲು ತಲೆಯೊಡೆದು ಸತ್ತನು.

**ಮಾಣು** = ನಿಲ್ಲಿಸು, ನಿವಾರಿಸು, ಬಿಡು

**ಅಳವಲ್ಲ** = ಸಾಧ್ಯವಲ್ಲ, ನಿಲುಕದ

**Classification:** Keerthane
**Ankita:** sri purandara vittala
**Location:** NA
**Category:** Dashavatara,
**Sub-Category:** loka, Krishna, kai, ranga, loka, koosu, bayi, govu, putani, gopi, kalinga, bali, akasha, prahallada, ambarisha, chakra, durvasa, shapa, asura, shiva, veda, paramatma, vidura, mane, kourava, bhumi, mosa, uraga, karuna, surya, tande, gaja, nage, ATa, indra,

**Pravachana:** NA

**Explanation:** NA